(20)

## ಸಿಂಡಿಕೇಟ್ ಸಭೆಯ ನಡವಳಿಗಳು

ದಿನಾಂಕ : 28.12.2023 ರಂದು ಗುರುವಾರ ಬೆಳಿಗ್ಗೆ 11.30 ಗಂಟೆಗೆ ರಾಯಚೂರು ವಿಶ್ವವಿದ್ಯಾಲಯದ ಆಡಳಿತ ಕಛೇರಿಯಲ್ಲಿ ಜರುಗಿದ ಸಾಮಾನ್ಯ ಸಿಂಡಿಕೇಟ್ ಸಭೆಯ ನಡವಳಿಗಳು.

### ಸಭೆಯಲ್ಲಿ ಉಪಸ್ಥಿತರಿದ್ದ ಸದಸ್ಯರು

| | | |
|---|---|---|
| 1. | ಪ್ರೊ.ಹರೀಶ್ ರಾಮಸ್ವಾಮಿ, ಮಾನ್ಯ ಕುಲಪತಿಗಳು | ಅಧ್ಯಕ್ಷರು |
| 2. | ಶ್ರೀ.ಶಿವಬಸಪ್ಪ ಮಾಲಿಪಾಟೀಲ್ | ಸಿಂಡಿಕೇಟ್ ಸದಸ್ಯರು |
| 3. | ಶ್ರೀ.ನಾಗೇಂದ್ರ ಪ್ರಸಾದ್ ಎ.ಎಂ | ಸಿಂಡಿಕೇಟ್ ಸದಸ್ಯರು |
| 4. | ಡಾ.ಅರುಣಾ ಕುಮಾರಿ ಟಿ, | ಸಿಂಡಿಕೇಟ್ ಸದಸ್ಯರು |
| 5. | ಡಾ.ಯಂಕಣ್ಣ | ಸಿಂಡಿಕೇಟ್ ಸದಸ್ಯರು |
| 6. | ಡಾ.ಕೆ.ಸುಭಾಷ್ ಚಂದ್ರ | ಸಿಂಡಿಕೇಟ್ ಸದಸ್ಯರು |
| 7. | ಶ್ರೀ. ನಾಗರಾಜ ನಾಯಕ | ಸಿಂಡಿಕೇಟ್ ಸದಸ್ಯರು |
| 8. | ಪ್ರೊ.ಪಾರ್ವತಿ ಸಿ.ಎಸ್. | ಸಿಂಡಿಕೇಟ್ ಸದಸ್ಯರು |
| 9. | ಪ್ರೊ.ಎಂ.ಯರಿಸ್ವಾಮಿ, ಕುಲಸಚಿವರು (ಮೌಲ್ಯಮಾಪನ) | ಸದಸ್ಯರು |
| 10. | ಪ್ರೊ.ವಿಶ್ವನಾಥ ಎಂ., ಕುಲಸಚಿವರು | ಸದಸ್ಯ ಕಾರ್ಯದರ್ಶಿಗಳು |

ಮೊದಲನೆಯದಾಗಿ ಕುಲಸಚಿವರು ಸಭಾ ಅಧ್ಯಕ್ಷರಾದ ಮಾನ್ಯ ಕುಲಪತಿಗಳನ್ನು ಹಾಗೂ ಸಭೆಗೆ ಆಗಮಿಸಿದ ಸಿಂಡಿಕೇಟ್ ಸದಸ್ಯರುಗಳನ್ನು ಸ್ವಾಗತಿಸಿ, ಸಭೆ ನಡೆಸಿಕೊಂಡು ಹೋಗಲು ಮಾನ್ಯ ಕುಲಪತಿಗಳಲ್ಲಿ ವಿನಂತಿಸುವುದರೊಂದಿಗೆ ಸಭೆಯು ಪ್ರಾರಂಭವಾಯಿತು.

| ಕಲಂ/ಐಟಂ ನಂ. | ವಿಷಯ | ಸಿಂಡಿಕೇಟ್ ಸಭೆಯ ನಿರ್ಣಯ |
|---|---|---|
| 01 | ದಿನಾಂಕ 09.11.2023 ರಂದು ಜರುಗಿದ ಸಾಮಾನ್ಯ ಸಿಂಡಿಕೇಟ್ ಸಭೆಯ ನಡವಳಿಗಳನ್ನು ದೃಢೀಕರಿಸುವ ಕುರಿತು. | ದಿನಾಂಕ: 09.11.2023 ರಂದು ಜರುಗಿದ ಸಿಂಡಿಕೇಟ್ ಸಾಮಾನ್ಯ ಸಭೆಯ ನಡವಳಿಗಳನ್ನು ದೃಢೀಕರಿಸಲಾಯಿತು. |
| 02 | ದಿನಾಂಕ 18.12.2023 ರಂದು ಜರುಗಿದ 2023-24 ನೇ ಆರ್ಥಿಕ ಸಾಲಿನ ಮೊದಲನೇ ಮತ್ತು ಎರಡನೇ ಹಣಕಾಸು ಸಮಿತಿ ಸಭೆಯ ನಡವಳಿಗಳನ್ನು ದೃಢೀಕರಿಸುವ ಕುರಿತು. | ರಾಯಚೂರು ವಿಶ್ವವಿದ್ಯಾಲಯದ 2024-25ನೇ ಸಾಲಿನ ಆಯವ್ಯಯವನ್ನು ಹಣಕಾಸು ಅಧಿಕಾರಿಗಳು ಸಭೆಗೆ ಮಂಡಿಸಿದರು.. ಮಾನ್ಯ ಕುಲಪತಿಗಳ ಅಧ್ಯಕ್ಷತೆಯಲ್ಲಿ ದಿನಾಂಕ 18.12.2023 ರಂದು ಜರುಗಿದ 2023-24 ನೇ ಆರ್ಥಿಕ ಸಾಲಿನ ಮೊದಲನೇ ಮತ್ತು ಎರಡನೇ ತ್ರೈಮಾಸಿಕ ಹಣಕಾಸು ಸಮಿತಿಯ ಸಭೆಯಲ್ಲಿ ಚರ್ಚಿಸಲಾದ 22 ವಿಷಯಗಳ ಬಗ್ಗೆ ಹಣಕಾಸು ಅಧಿಕಾರಿಗಳು ಸಭೆಗೆ ವಿಸ್ತಾರವಾಗಿ ವಿವರಣೆ ನೀಡಿದರು. ರಾಯಚೂರು ವಿಶ್ವವಿದ್ಯಾಲಯದ 2024-25ನೇ ಸಾಲಿನ ಆಯವ್ಯಯ ಅಂದಾಜುಗಳ ವೆಚ್ಚ ಅಂದಾಜುಗಳ ಅಪೆಂಡಿಕ್ಸ್-ಬಿ (ಅನುಬಂಧ-1) ವೆಚ್ಚಗಳನ್ನು ಸರ್ಕಾರಕ್ಕೆ ಸಲ್ಲಿಸಿರುವ ಬಗ್ಗೆ ವಿವರಣೆಯನ್ನು ನೀಡಿ, ಅದನ್ನು ಸಭೆಯಲ್ಲಿ ಚರ್ಚಿಸಿ ಸರ್ಕಾರಕ್ಕೆ ಸಲ್ಲಿಸಲು ತೀರ್ಮಾನಿಸಿ ಸರ್ವಾನುಮತದಿಂದ ಅಂಗೀಕರಿಸಿ ದೃಢೀಕರಿಸಲಾಯಿತು.<br><br>ಕರ್ನಾಟಕ ಸರ್ಕಾರ ನೇಮಿಸಿದಂತಹ ಏಕರೂಪ ಶುಲ್ಕ ತಜ್ಞರ ಸಮಿತಿಯ ವರದಿಯನ್ನು (ಉನ್ನತ ಶಿಕ್ಷಣ |

| | | |
|---|---|---|
| | | ಇಲಾಖೆಯ ವ್ಯಾಪ್ತಿಗೊಳಪಡುವ ಹಾಗೂ ಕರ್ನಾಟಕ ರಾಜ್ಯ ವಿಶ್ವವಿದ್ಯಾಲಯಗಳ ಅಧಿನಿಯಮ 2000ರಡಿ ನಿಯಂತ್ರಿಸಲ್ಪಡುವ, ಸಂಯೋಜನೆಗೊಳಿಸುವ ಹಾಗೂ ಏಕಾತ್ಮಕ ವಿಶ್ವವಿದ್ಯಾಲಯಗಳು ಸಹ ಸೇರಿ ಎಲ್ಲಾ ವಿಶ್ವವಿದ್ಯಾಲಯಗಳಲ್ಲಿ ಸಾಮಾನ್ಯವಾಗಿ ಅನ್ವಯಿಸುವಂತೆ ವಿವಿಧ ಕೋರ್ಸುಗಳಿಗೆ ಏಕರೂಪದ ವಿದ್ಯಾರ್ಥಿ ಶುಲ್ಕಗಳನ್ನು ನಿಗದಿಪಡಿಸಲು, ಏಕರೂಪದ ಪರೀಕ್ಷಾ ಸಂಭಾವನೆಯನ್ನು ಗೊತ್ತುಪಡಿಸಲು ಹಾಗೂ ಪರೀಕ್ಷಾ ವವ್ಯಸ್ಥೆಯನ್ನು ಸುವ್ಯವಸ್ಥಿತವಾಗೊಳಿಸುವ) ಉನ್ನತ ಶಿಕ್ಷಣ ಇಲಾಖೆಯು ವಿಶ್ವವಿದ್ಯಾಲಯಗಳಿಗೆ ಈ ವರದಿಯನ್ನು ಅನುಷ್ಠಾನಗೊಳಿಸಲು ನಿರ್ದೇಶಿಸಿರುತ್ತದೆ. ಈ ಆದೇಶದ ಪ್ರಕಾರ ರಾಯಚೂರು ವಿಶ್ವವಿದ್ಯಾಲಯವು ಸರಕಾರದ ವರದಿಯನ್ನು ಒಪ್ಪಿಕೊಂಡು ಅನುಷ್ಠಾನಗೊಳಿಸಲು ತೀರ್ಮಾನಿಸಿದ್ದು, ಈ ವರದಿಯನ್ನು ಪರಿನಿಯಮಾವಳಿಯಾಗಿ ರೂಪಿಸಿ ಸರಕಾರದ ಒಪ್ಪಿಗೆಗೆ ಕಳುಹಿಸಲು ಸಭೆಯಲ್ಲಿ ಅನುಮೋದಿಸಲಾಯಿತು.<br><br>ರಾಯಚೂರು ವಿಶ್ವವಿದ್ಯಾಲಯಕ್ಕೆ ಹೆಚ್ಚಿನ ಅನುದಾನ ಬಿಡುಗಡೆ ಮಾಡುವ ಬಗ್ಗೆ ಚರ್ಚಿಸಿ, ಸರ್ಕಾರದ ಮಟ್ಟದಲ್ಲಿ ಸಿಂಡಿಕೇಟ್ ಸದಸ್ಯರು ವಿಶ್ವವಿದ್ಯಾಲಯದ ಮಾನ್ಯ ಕುಲಪತಿಗಳು, ಕುಲಸಚಿವರು ಹಾಗೂ ಅಧಿಕಾರಿಗಳು ಜನ ಪ್ರತಿನಿಧಿಗಳನ್ನು ಭೇಟಿ ಮಾಡಿ ವಿಶ್ವವಿದ್ಯಾಲಯಕ್ಕೆ ಆಯವ್ಯಯದಲ್ಲಿ ಹೆಚ್ಚಿನ ಅನುದಾನ ನೀಡಲು ಕೋರಿಕೊಳ್ಳಬೇಕೆಂದು ತೀರ್ಮಾನಿಸಲಾಯಿತು. ಮುಂದುವರೆದು, ಹಣಕಾಸು ಸಮಿತಿ, ವಿದ್ಯಾ ವಿಷಯಕ ಪರಿಷತ್ ಸಭೆಯಲ್ಲಿ ಮಂಡಿಸಿದ 2024-25 ನೇ ಸಾಲಿನ ಆಯವ್ಯಯವನ್ನು ಒಪ್ಪಿಗೆ ಪಡೆದ ಆಯವ್ಯಯವನ್ನು ಸಿಂಡಿಕೇಟ್ ಸಭೆಯು ಸರ್ವಾನುಮತದಿಂದ ಒಪ್ಪಿಗೆ ಸೂಚಿಸಿ, ಸರ್ಕಾರಕ್ಕೆ ಸಲ್ಲಿಸಲು ಹಣಕಾಸು ಅಧಿಕಾರಿಗಳಿಗೆ ಸೂಚಿಸಲಾಯಿತು. |
| 03 | ರಾಯಚೂರು ವಿಶ್ವವಿದ್ಯಾಲಯದ ಕರಡು ವಿಧೇಯಕ ಹಾಗೂ ಕ್ರಮ ನಿಯಮಾವಳಿ-2023 (Raichur University Statutes and Regulations-2023) ಗಳನ್ನು ಚರ್ಚಿಸಿ ಅನುಮೋದಿಸುವ ಕುರಿತು. | ರಾಯಚೂರು ವಿಶ್ವವಿದ್ಯಾಲಯಕ್ಕೆ ಪ್ರಮುಖವಾದ ವಿಧೇಯಕಗಳ/ಕ್ರಮನಿಯಮಾವಳಿಗಳನ್ನು ರಚಿಸಲು ಸ್ಥಾಪಿಸಿದ ಸಮಿತಿ ನೀಡಿರುವ ನಿಯಮಾವಳಿ ಕರಡು ವಿದೇಯಕಗಳನ್ನು ಕುಲಸಚಿವರು ಸಭೆಯಲ್ಲಿ ಮಂಡಿಸಿದರು. ಮೊದಲನೇಯದಾಗಿ ಸಿಬ್ಬಂದಿ ಹಾಗೂ ನೇಮಕಾತಿ ನಿಯಮಗಳು (Cadre And Recruitment Rules-2023) ವಿಶ್ವವಿದ್ಯಾಲಯದ ಬೋಧಕೇತರ ಸಿಬ್ಬಂದಿಗಳನ್ನು ನೇಮಕ ಮಾಡಿಕೊಳ್ಳಲು ಬೇಕಾಗಿರುವ ವಿಧೇಕವನ್ನು ಕುಲಂಕೂಷವಾಗಿ ಚರ್ಚಿಸಿ ಈ ಕುರಿತು ಕರಡು ವಿಧೇಯಕವನ್ನು ಅಂಗೀಕರಿಸಿ, ಸರ್ಕಾರದ ಒಪ್ಪಿಗೆಗೆ ಕಳುಹಿಸಲು ಸಭೆಯಲ್ಲಿ ತೀರ್ಮಾನಿಸಿ ಅನುಮೋದಿಸಲಾಯಿತು.<br><br>ಎರಡನೇಯದಾಗಿ ಪಿಎಚ್‌ಡಿ ಪರಿನಿಯಮಾವಳಿ 2023 ರನ್ನು ಕುಲಸಚಿವರು ಸಭೆಗೆ ಮಂಡಿಸಿದರು. |

| | | |
|---|---|---|
| | | ಯುಜಿಸಿ ಪಿಎಚ್‌ಡಿ ಪರಿನಿಯಮಾವಳಿ 2022ರ ಪ್ರಕಾರ ಈ ಪರಿನಿಯಮಾವಳಿಗಳನ್ನು ರಚಿಸಲಾಗಿರುತ್ತದೆ ಎಂದು ತಿಳಿಸಿದರು. ಈ ಪರಿನಿಯಮಾವಳಿಗಳನ್ನು ಕುಲಂಕೂಷವಾಗಿ ಸಭೆಯಲ್ಲಿ ಚರ್ಚಿಸಿ, ಅನುಮೋದಿಸಿ ಮುಂದಿನ ಕ್ರಮಕ್ಕಾಗಿ ಸರ್ಕಾರಕ್ಕೆ ಕಳುಹಿಸಿ ಕೊಡಲು ನಿರ್ಧರಿಸಲಾಯಿತು.<br>ಮೂರನೇಯದಾಗಿ, ಅಡ್ಜಂಟ್ ಫ್ಯಾಕಲ್ಟಿ ಮತ್ತು ಪ್ರೊಫೇಸರ್ ಆಫ್ ಪ್ರಾಕ್ಟೀಸ್ ನೇಮಿಸಿಕೊಳ್ಳುವ ಕರಡು ವಿಧೇಯಕವನ್ನು ಕುಲಂಕೂಷವಾಗಿ ಕುಲಸಚಿವರು ಸಭೆಗೆ ಮಂಡಿಸಿದರು. ಯುಜಿಸಿ ನಿಯಮನುಸಾರ ಅಡ್ಜಂಟ್ ಫ್ಯಾಕಲ್ಟಿ ಮತ್ತು ಪ್ರೊಫೇಸರ್ ಆಫ್ ಪ್ರಾಕ್ಟೀಸ್ ಇವರುಗಳನ್ನು ನೇಮಿಸಿಕೊಳ್ಳುವ ಅವಕಾಶ ಮಾಡಿಕೊಟ್ಟಿದ್ದು, ವಿಷಯ ಪರಿಣಿತರನ್ನು ವಿಶ್ವವಿದ್ಯಾಲಯಕ್ಕೆ ಅವಶ್ಯಕತೆಗನುಗುಣವಾಗಿ ನೇಮಿಸಲು ಈ ಪರಿನಿಯಮಾವಳಿನ್ನು ರಚಿಸಲಾಗಿರುತ್ತದೆ ಎಂದು ತಿಳಿಸಿದರು. ಈ ಕರಡು ವಿಧೇಯಕವನ್ನು ಯುಜಿಸಿ ನಿಯಮ್ಮಾವಳಿಗಳನ್ನು ಸಭೆಯಲ್ಲಿ ಮಂಡಿಸಿ ಸುದೀರ್ಘವಾಗಿ ಚರ್ಚಿಸಿ, ಈ ವಿಚಾರದ ಬಗ್ಗೆ ಒಮ್ಮತದಿಂದ ಕರಡು ವಿಧೇಯಕವನ್ನು ಅಂಗೀಕರಿಸಿ, ಮುಂದಿನ ಕ್ರಮಕ್ಕೆ ಸರ್ಕಾರಕ್ಕೆ ಕಳುಹಿಸಿಕೊಡಲು ಸೂಚಿಸಲಾಯಿತು. |
| 04 | ರಾಯಚೂರು ವಿಶ್ವವಿದ್ಯಾಲಯದ ಪರೀಕ್ಷಾ ಕ್ರಮ ನಿಯಮಾವಳಿ –2023 (Raichur University Examination and ordinance -2023) ಗಳನ್ನು ಚರ್ಚಿಸಿ ಅನುಮೋದಿಸುವ ಕುರಿತು. | ರಾಯಚೂರು ವಿಶ್ವವಿದ್ಯಾಲಯದ ಪರೀಕ್ಷಾಕ್ರಮ ನಿಯಮಾವಳಿ ರಚಿಸಲು ಸ್ಥಾಪಿಸಿದ ಸಮಿತಿಯು ನೀಡಿದಂತಹ draft regulation ನ್ನು ಈ ಕೆಳಕಂಡಂತೆ ಕುಲಸಚಿವರು (ಮೌಲ್ಯಮಾಪನ) ಇವರು ಸಭೆಗೆ ಮಂಡಿಸಿದರು.<br>a. Draft Raichur University ordinance governing the acts of punishment for duties, misbehavior and indiscipline by person involved in university examination work.<br>b. Draft Raichur University Ordinance governing revaluation/challenge valuation of answer book and grace marks of the university examination.<br>ಈ ordinance ಗಳನ್ನು ಸುದೀರ್ಘವಾಗಿ ಚರ್ಚಿಸಿ ಅನುಮೋದಿಸಲಾಯಿತು. ಮುಂದುವರೆದು ಈ ಅನುಮೋದನೆಗೊಂಡ ordinanceಗಳನ್ನು ಘನತೆವೆತ್ತ ರಾಜ್ಯಪಾಲರಿಗೆ ಮುಂದಿನ ಕ್ರಮಕ್ಕಾಗಿ ಕಳುಹಿಸಿಕೊಡಲು ಸೂಚಿಸಲಾಯಿತು. |
| 05 | ರಾಯಚೂರು ವಿಶ್ವವಿದ್ಯಾಲಯದಲ್ಲಿ 2021-22 ನೇ ಶೈಕ್ಷಣಿಕ ಸಾಲಿನಿಂದ ಪ್ರಾರಂಭವಾದ 03 ವಿಜ್ಞಾನ ವಿಭಾಗಗಳಾದ ಸಸ್ಯಶಾಸ್ತ್ರ, ಪ್ರಾಣಿಶಾಸ್ತ್ರ ಮತ್ತು ಸೂಕ್ಷ್ಮ ಜೀವಶಾಸ್ತ್ರ (Botany, Zoology and Micro Biology) ಅಧ್ಯಯನ ವಿಭಾಗಗಳಿಗೆ ವೈಜ್ಞಾನಿಕ ಉಪಕರಣಗಳನ್ನು (Science Lab Equipments) ಖರೀದಿಸುವ ಕುರಿತು ಚರ್ಚೆ. | ಮಾನ್ಯ ಕುಲಪತಿಗಳು, ಸಭೆಯಲ್ಲಿ ವಿವಿಧ ಜೈವಿಕ ವಿಜ್ಞಾನ ವಿಭಾಗಗಳಾದ ಸಸ್ಯಶಾಸ್ತ್ರ, ಪ್ರಾಣಿಶಾಸ್ತ್ರ ಮತ್ತು ಸೂಕ್ಷ್ಮಜೀವಶಾಸ್ತ್ರ ಅಧ್ಯಯನ ವಿಭಾಗಳಿಗೆ ಅತ್ಯವಶ್ಯಕವಾಗಿ ಬೇಕಾಗಿರುವ ಪ್ರಯೋಗಾಲಯ ಹಾಗೂ ಉಪಕರಣಗಳ ಬಗ್ಗೆ ಚರ್ಚಿಸಿದರು. ಸರ್ಕಾರದ ಅನುದಾನದಡಿಯಲ್ಲಿ ಬಂದಂತಹ 15 ಕೋಟಿ ರೂ.ಗಳ ಪ್ರಕಾರ ಪ್ರಯೋಗಾಲಯಗಳ ನಿರ್ಮಾಣ ನಡೆಯುತ್ತಿದ್ದು ಹಾಗೂ ಭೌತಶಾಸ್ತ್ರ ಮತ್ತು ರಸಾಯನಶಾಸ್ತ್ರ ಪ್ರಯೋಗಾಲಯ |

| | | |
|---|---|---|
| | | ಉಪಕರಣಗಳನ್ನು ನಿಯಮನುಸಾರ ಖರೀದಿಸಲು ಮೀಸಲಿಟ್ಟ 226.5 ಲಕ್ಷ ರೂಗಳಲ್ಲಿ ಉಪಕರಣಗಳನ್ನು ಖರೀದಿಸಲು 1,19,85,965 ರೂಗಳಿಂದ ಭೌತಶಾಸ್ತ್ರ ಮತ್ತು ರಸಾಯನಶಾಸ್ತ್ರ ಪ್ರಯೋಗಾಲಯ ಉಪಕರಣಗಳನ್ನು ನಿಯಮನುಸಾರ ಖರೀದಿಸಲಾಗಿರುತ್ತದೆ. ಈ ಶೀರ್ಷಿಕೆ ಅಡಿಯಲ್ಲಿ ಇಗ ಮಿಕ್ಕುಳಿದ 1,06,64,035 ರೂಗಳಲ್ಲಿ ಈ ಹಣದಿಂದ ಸಸ್ಯಶಾಸ್ತ್ರ, ಪ್ರಾಣಿಶಾಸ್ತ್ರ ಮತ್ತು ಸೂಕ್ಷ್ಮಜೀವಶಾಸ್ತ್ರ ಅಧ್ಯಯನ ವಿಭಾಗಗಳಿಗೆ ಉಪಕರಣಗಳನ್ನು ನಿಯಮನುಸಾರ ಖರೀದಿಸಲು ಲಭ್ಯವಿರುತ್ತದೆ ಎಂದು ಕುಲಪತಿಗಳು ಸಭೆಗೆ ತಿಳಿಸಿದರು.<br>ಮುಂದುವರೆದು, ಮಾಡ್ಯುಲೆರ್ ಲ್ಯಾಬ್ ನಿರ್ಮಾಣ ಮಾಡಲು 292.50 ಲಕ್ಷರೂಗಳು ನಿಗದಿಯಾಗಿತ್ತು. ಟೆಂಡರ್ ಪ್ರಕ್ರಿಯೆ ಮುಗಿದಿದ್ದು, ಸದರಿ ಕಾಮಗಾರಿಯಲ್ಲಿ 2,69,64,218 ರೂಗಳ ಕಾರ್ಯಾದೇಶ ನೀಡಲಾಗಿರುತ್ತದೆ. ಹಾಗಾಗಿ 22,85,982 ರೂಗಳು ಆ ಶೀರ್ಷಿಕೆಯಲ್ಲಿ ಉಳಿದಿರುತ್ತದೆ. ಹಾಗಾಗಿ ಒಟ್ಟು 1,29,50,017 ರೂಗಳು ಸಸ್ಯಶಾಸ್ತ್ರ, ಪ್ರಾಣಿಶಾಸ್ತ್ರ ಹಾಗೂ ಸೂಕ್ಷ್ಮಜೀವಶಾಸ್ತ್ರ ವಿಭಾಗಗಳ ಉಪಕರಣ ಖರೀದಿಸಲು ಲಭ್ಯವಿರುತ್ತದೆ.<br>ಮುಂದುವರೆದು, ದಿನಾಂಕ 21.06.2023 ರ ಸಿಂಡಿಕೇಟ್ ಸಭೆಯ ನಡವಳಿ 5 ರ ಪ್ರಕಾರದಂತೆ ಉಪಕರಣಗಳ ಖರೀದಿಗೆ ವಿಷಯ ತಜ್ಞರ ಸಮಿತಿ ರಚಿಸಲಾಗಿದ್ದು, ಆ ಸಮಿತಿಯು ತನ್ನ ವರದಿಯನ್ನು ವಿಶ್ವವಿದ್ಯಾಲಯಕ್ಕೆ ನೀಡಿರುತ್ತದೆ. ಸಭೆಯು ಈ ವರದಿ ಬಗ್ಗೆ ಚರ್ಚಿಸಲು ಅಡ್ಜಂಟ್ ಫ್ಯಾಕಲ್ಟಿ ಡಾ.ಪ್ರಭಂಜನ ಗಾಯಿ ಅವರನ್ನು ಸಭೆಗೆ ಕರೆಯಿಸಿ, ಸಮಿತಿ ನೀಡಿರುವ ವರದಿಯನ್ನು ವಿಶ್ಲೇಷಿಸಬೇಕೆಂದು ತಿಳಿಸಿದರು. ಸಭೆಗೆ ಡಾ.ಪ್ರಭಂಜನ ಗಾಯಿ ಅವರು ಹಾಜರಾಗಿ, ಸಮಿತಿ ನೀಡಿದ ವರದಿಯನ್ನು ಪರಿಪೂರ್ಣವಾಗಿ ಒಪ್ಪಬೇಕೆಂದು ಮತ್ತು ಈ ವರದಿಯನ್ನು ಅನುಷ್ಠಾನಗೊಳಿಸಲು ಈ ಮೂರು ವಿಭಾಗಗಳಿಗೆ ಅವಶ್ಯಕತೆವಿರುವ ಉಪಕರಣಗಳ ಖರೀದಿಗೆ 3.50 ಲಕ್ಷ ರೂಗಳ ಅವಶ್ಯಕತೆ ಇರುತ್ತದೆ ಎಂದು ತಿಳಿಸಿದರು.<br>ಜೈವಿಕ ವಿಜ್ಞಾನ ವಿಭಾಗಗಳ ವಿದ್ಯಾರ್ಥಿಗಳ ಹಿತಾಸಕ್ತಿಗಳನ್ನು ಗಮನದಲ್ಲಿಟ್ಟುಕೊಂಡು ತ್ವರಿತವಾಗಿ ಪ್ರಯೋಗಾಲಯದ ಉಪಕರಣಗಳ ಖರೀದಿ ಶೀರ್ಷಿಕೆಯಲ್ಲಿ ಇರುವಂತಹ 1,29,50,017 ರೂಗಳಿಗೆ ವಿಶ್ವವಿದ್ಯಾಲಯದ ಆಂತರಿಕ ಸಂಪನ್ಮೂಲಗಳಿಂದ 221 ಲಕ್ಷ ರೂಗಳನ್ನು ಬಳಸಿಕೊಂಡು ಒಟ್ಟು ಅವಶ್ಯಕತೆವಿರುವ ಉಪಕರಣಗಳ ಖರೀದಿಗೆ 3.50 ಲಕ್ಷ ರೂಗಳನ್ನು ಬಳಸಿಕೊಳ್ಳಲು ಸಭೆಯ ಸದಸ್ಯರು ಸರ್ವಾನುಮತದಿಂದ ಒಪ್ಪಿಗೆ ಸೂಚಿಸಿ, ಅನುಮೋದಿಸಿದರು.<br>ಮುಂದುವರೆದು ಈ ಖರೀದಿಯನ್ನು ಕೆಟಿಪಿಪಿ ಕಾಯ್ದೆಯಂತೆ ನಿಯಮನುಸಾರ ಟೆಂಡರ್ ಮುಖಾಂತರ ಖರೀದಿಸಲು ನಿರ್ಣಯಿಸಿ, ಅಂಗೀಕರಿಸಲಾಯಿತು. |

| | | |
|---|---|---|
| 06 | ರಾಯಚೂರು ವಿಶ್ವವಿದ್ಯಾಲಯಕ್ಕೆ ಮಂಜೂರಾದ 31 ಬೋಧಕ ಹುದ್ದೆಗಳಿಗೆ ಸ್ಥಳೀಯ ಮತ್ತು ಉಳಿದ ಮೂಲ ವೃಂದಗಳ ಹುದ್ದೆಗಳಿಗೆ ಸಿಬ್ಬಂದಿ ಆಡಳಿತ ಸುಧಾರಣಾ ಇಲಾಖೆಯಿಂದ ರೋಸ್ಟರ್ ಬಿಂದುವನ್ನು ಅಳವಡಿಸಿ ಸರ್ಕಾರದ ಉದ್ಯೋಗ ಮೀಸಲಾತಿ ನಿಯಮಾನುಸಾರ ವರ್ಗೀಕರಿಸುವ ಕುರಿತು ಚರ್ಚೆ. | ರಾಯಚೂರು ವಿಶ್ವವಿದ್ಯಾಲಯಕ್ಕೆ ಸರ್ಕಾರದಿಂದ (ಆದೇಶ ಸಂಖ್ಯೆ: ಇಡಿ 32 ಯುಜಿವಿ 2021 ದಿನಾಂಕ: 14.07.2022) ೩೧ ಬೋಧಕ ಹುದ್ದೆಗಳನ್ನು ಸೃಜಿಸಿ ಆದೇಶಿಸಿದೆ. ಈ ಆದೇಶದಂತೆ 02 ಪ್ರಾಧ್ಯಾಪಕ, 05 ಸಹ ಪ್ರಾಧ್ಯಾಪಕ ಹಾಗೂ 24 ಸಹಾಯಕ ಪ್ರಾಧ್ಯಾಪಕ ಹುದ್ದೆಗಳು ರಾಯಚೂರು ವಿಶ್ವವಿದ್ಯಾಲಯಕ್ಕೆ ಸೃಜನೆಯಾಗಿರುತ್ತದೆ. ವಿಶ್ವವಿದ್ಯಾಲಯವು ಸೃಜನೆಗೊಂಡ ಈ ಹುದ್ದೆಗಳನ್ನು 371(ಜೆ) ಗುರುತಿಸಿ/ವರ್ಗೀಕರಿಸಲು ಸರ್ಕಾರಕ್ಕೆ ಕಳುಹಿಸಿ ಕೊಟ್ಟಿದ್ದು, ಸರ್ಕಾರವು 371(ಜೆ) ಮೀಸಲಾತಿ ವೃಂದದ ಹುದ್ದೆಗಳನ್ನು ನಿಯಮನುಸಾರ ವರ್ಗೀಕರಣವನ್ನು ಮಾಡಿ 1 ಪ್ರಾಧ್ಯಾಪಕರ ಹುದ್ದೆ, 4 ಸಹ ಪ್ರಾಧ್ಯಾಪಕ ಹುದ್ದೆ ಹಾಗೂ 18 ಸಹಾಯಕ ಪ್ರಾಧ್ಯಾಪಕ ಹುದ್ದೆಗಳೆಂದು ವರ್ಗೀಕರಿಸಿ, ಆ ಆದೇಶವನ್ನು ವಿಶ್ವವಿದ್ಯಾಲಯಕ್ಕೆ ಕಳುಹಿಸಿ (ಇಡಿ 86 ಯುಜಿವಿ 2022, ದಿನಾಂಕ: 29.03.2023) ಅಧಿಸೂಚಿಸಲು ನಿರ್ದೇಶನ ನೀಡಿರುತ್ತದೆ. ಅದರನ್ವಯ ವಿಶ್ವವಿದ್ಯಾಲಯವು ಸಂಖ್ಯೆ: ರಾವಿರಾ/ಆಡಳಿತ/371(ಜೆ)/2023-24/86, ದಿನಾಂಕ: 17.04.2023 ಅಧಿಸೂಚನೆ ಹೊರಡಿಸಿರುತ್ತದೆ.<br>ಮುಂದುವರೆದು ವರ್ಗೀಕೃತಗೊಂಡ ಒಟ್ಟು 31 ಬೋಧಕ ಹುದ್ದೆಗಳಿಗೆ ರೋಸ್ಟರ್ ಬಿಂದುಗಳನ್ನು ಅಳವಡಿಸಲು ಸಮಾಜ ಕಲ್ಯಾಣ ಇಲಾಖೆ ಬೆಂಗಳೂರು ಇವರಿಗೆ ಕಳುಹಿಸಿ ಕೊಡಲಾಗಿರುತ್ತದೆ. ಸಮಾಜ ಕಲ್ಯಾಣ ಇಲಾಖೆಯು ವಿಶ್ವವಿದ್ಯಾಲಯಕ್ಕೆ ವರ್ಗೀಕರಿಸಿರುವ 24 ಸಹಾಯಕ ಪ್ರಾಧ್ಯಾಪಕ ಹುದ್ದೆಗಳಲ್ಲಿ ವಿಷಯ/ವಿಭಾಗವಾರು ಮೀಸಲಾತಿ ಗುರುತಿಸಬೇಕೆಂದು ತಿಳಿಸಿರುತ್ತದೆ.<br>ಈ ವಿಚಾರವಾಗಿ ಸಭೆಯಲ್ಲಿ ಸುದೀರ್ಘವಾಗಿ ಚರ್ಚಿಸಿ 371 (ಜೆ) ಮೀಸಲಿಟ್ಟ 18 ಹುದ್ದೆಗಳು, ಹಾಗೂ ಮಿಕ್ಕುಳಿದ ವೃಂದಗಳ 06 ಹುದ್ದೆಗಳನ್ನು ವಿಷಯವಾರು ವಿಂಗಡಿಸಲು ನಿರ್ಧರಿಸಲಾಯಿತು. ಕುಲಸಚಿವರು ಸಭೆಯಲ್ಲಿ ವಿಷಯವಾರು ರೋಸ್ಟರ್ ಬಿಂದುವನ್ನು ಅಳವಡಿಸಿಕೊಂಡು ಸಾಮಾಜಿಕ ನ್ಯಾಯ ಕಾಪಾಡಲು ಹಾಗೂ ಸರ್ಕಾರದ ನಿರ್ದೇಶನವನ್ನು ಪಾಲಿಸಲು '02' ಹುದ್ದೆಗಳು ಇರುವಂತಹ ವಿಷಯ/ವಿಭಾಗಗಳಿಗೆ 371(ಜೆ) ಮೀಸಲಿಟ್ಟು, ರೋಸ್ಟರ್ ಪ್ರಕಾರ ಮೊದಲನೇಯ ಬಿಂದು ಹುದ್ದೆಯು ಪರಿಶಿಷ್ಟ ಜಾತಿ (ಇತರೆ) ಹಾಗೂ ಎರಡನೇಯ ಹುದ್ದೆಯು ರೋಸ್ಟರ್ ಬಿಂದು ಸಾಮಾನ್ಯ ಅಭ್ಯರ್ಥಿ (ಇತರೆ) ಆಗುತ್ತದೆ ಎಂದು ತಿಳಿಸಿದರು. ಇದರಿಂದ 09 ವಿಭಾಗಗಳಲ್ಲಿ ಒಂದು ಪರಿಶಿಷ್ಟ ಜಾತಿ (ಇತರೆ) ಹಾಗೂ 09 ಸಾಮಾನ್ಯ ಅಭ್ಯರ್ಥಿ (ಇತರೆ) ಯಾಗಿ ಗುರುತಿಸಬಹುದಾಗಿದೆ. (ಒಟ್ಟು 18 ಸಹಾಯಕ ಪ್ರಾಧ್ಯಾಪಕ ಹುದ್ದೆಗಳು) ಮುಂದುವರೆದು, ಒಂದು ಹುದ್ದೆ ಇರುವ ವಿಷಯ/ವಿಭಾಗವನ್ನು 371 (ಜೆ) ಮಿಕ್ಕುಳಿದ ವೃಂದದ ಪ್ರಕಾರ ವರ್ಗೀಕರಿಸಿ 06 ವಿಷಯ/ವಿಭಾಗಗಳಿಗೆ ಗುರುತಿಸಿದರೆ ಆ ಹುದ್ದೆಯು ನಿಯಮಾನುಸಾರ ಸಾಮಾನ್ಯ ಅಭ್ಯರ್ಥಿ (ಇತರೆ) ಯಾಗಿರುತ್ತದೆ.<br>ಈ ರೀತಿ ರೋಸ್ಟರ್ ಬಿಂದುವನ್ನು ನಿರ್ಣಯಿಸಿ 02 ಹುದ್ದೆಗಳಿರುವ ವಿಭಾಗಗಳಲ್ಲಿ ಸಾಮಾಜಿಕ ನ್ಯಾಯ ಕಾಪಾಡಿಕೊಳ್ಳಲು ಒಂದು ಹುದ್ದೆಯು ಪರಿಶಿಷ್ಟ ಜಾತಿ |

| | | |
|---|---|---|
| | | (ಇತರೆ) ಮತ್ತೊಂದು ಸಾಮಾನ್ಯ ಅಭ್ಯರ್ಥಿ (ಇತರೆ) ಯಾಗಿ ಹಾಗೂ 371 (ಜೆ) ಮಿಕ್ಕುಳಿದ ವೃಂದದ ಹುದ್ದೆಗಳು ವಿಷಯವಾರು ಒಂದೇ ಹುದ್ದೆಯಾಗಿ ರೋಸ್ಟರ್ ಬಿಂದುವಿನ ಪ್ರಕಾರ ಸಾಮಾನ್ಯ ಅಭ್ಯರ್ಥಿ (ಇತರೆ) ಆಗುತ್ತದೆ. **ಇದರಂತೆ ಈ ಕೆಳಗೆ ಇರುವ ಟೇಬಲ್ ಪ್ರಕಾರ** 371(ಜೆ) ಹಾಗೂ 371 (ಜೆ) ಮಿಕ್ಕುಳಿದ ವೃಂದ ಮೀಸಲಾತಿ ಹುದ್ದೆಗಳನ್ನು ಸಭೆಯಲ್ಲಿ ಕುಲಂಕೂಷವಾಗಿ ಚರ್ಚಿಸಿ ಪಟ್ಟಿಯಲ್ಲಿ ವಿಷಯ/ವಿಭಾಗವಾರು ಹಾಗೂ 371(ಜೆ) ಹಾಗೂ 371 (ಜೆ) ಮಿಕ್ಕುಳಿದ ವರ್ಗೀಕರಿಸಿರುವ ಪಟ್ಟಿಯನ್ನು ಸಭೆಯು ಸರ್ವಾನುಮತದಿಂದ ಒಪ್ಪಿಗೆ ನೀಡಿ ಅನುಮೋದಿಸಿತು ಹಾಗೂ ಈ ನಿರ್ಣಯವನ್ನು ಸಮಾಜ ಕಲ್ಯಾಣ ಇಲಾಖೆ, ಉನ್ನತ ಶಿಕ್ಷಣ ಇಲಾಖೆಗೆ ಕಳುಹಿಸಿಕೊಟ್ಟು, ವಿಶ್ವವಿದ್ಯಾಲಯವು ಶೀಘ್ರದಲ್ಲೆ 31 ಬೋಧಕ ಹುದ್ದೆಗಳನ್ನು ನೇಮಿಸಿಕೊಳ್ಳಲು ಜಾಹೀರಾತು ನೀಡಲು ಸರ್ಕಾರದಿಂದ ಅನುಮತಿ ಪಡೆದುಕೊಂಡು ಮುಂದಿನ ಕ್ರಮ ಕೈಗೊಳ್ಳಬೇಕೆಂದು ನಿರ್ಣಯಿಸಲಾಯಿತು.<br>**(ಐಸಂ.06 ರ ಟೇಬಲ್‌ನ್ನು ಕೊನೆಯ ಪುಟದಲ್ಲಿ ಲಗತ್ತಿಸಲಾಗಿದೆ.)** |
| 07 | 2023-24 ನೇ ಸಾಲಿನಲ್ಲಿ ವಿಶ್ವವಿದ್ಯಾಲಯದ ವಿವಿಧ ಅಧ್ಯಯನ ವಿಭಾಗಗಳಿಗೆ ಕಾರ್ಯಭಾರ ಹಾಗೂ ಅಗತ್ಯತೆಗನುಸಾರವಾಗಿ ಅತಿಥಿ ಉಪನ್ಯಾಸಕರನ್ನು ಸಂದರ್ಶನ ಮುಖಾಂತರ ಆಯ್ಕೆ ಮಾಡಿದ ಅತಿಥಿ ಉಪನ್ಯಾಸಕರ ಪಟ್ಟಿಯನ್ನು ಹಾಗೂ ಅವರ ಶೈಕ್ಷಣಿಕ ವಿದ್ಯಾರ್ಹತೆ ಮೇಲೆ ನಿಗದಿ ಪಡಿಸಿದ ವೇತನವನ್ನು ಸಿಂಡಿಕೇಟ್‌ನಲ್ಲಿ ಚರ್ಚಿಸಿ ಅನುಮೋದಿಸುವ ಕುರಿತು. | 2023-24 ನೇ ಸಾಲಿನಲ್ಲಿ ವಿಶ್ವವಿದ್ಯಾಲಯವ ವಿವಿಧ ಅಧ್ಯಯನಗಳಿಗೆ ಇರುವ ಕಾರ್ಯಭಾರ ಹಾಗೂ ಯುಜಿಸಿ ನಿಯಮಾವಳಿ ಪ್ರಕಾರ ಅಗತ್ಯತೆಗೆ ಅನುಸಾರವಾಗಿ, ಅತಿಥಿ ಉಪನ್ಯಾಸಕರ ಸಂದರ್ಶನವನ್ನು ಮಾನ್ಯ ಕುಲಪತಿಗಳ ಅಧ್ಯಕ್ಷತೆಯಲ್ಲಿ, ಡೀನರು ಹಾಗೂ ವಿಷಯ ತಜ್ಞರ ಸಮಿತಿ ಮೂಲಕ ಆಯ್ಕೆ ಮಾಡಿದ್ದು, ಈ ಆಯ್ಕೆ ಪ್ರಕ್ರಿಯೆಯು ವಿಡಿಯೋ ಕ್ಯಾಮೆರಾ ಮುಖಾಂತರ ಚಿತ್ರಿಸಲಾಗಿರುತ್ತದೆ. ಆಯ್ಕೆ ಸಮಿತಿಯು ಆಯ್ಕೆ ಮಾಡಿದ ಅರ್ಹ ಉಪನ್ಯಾಸಕರ ಪಟ್ಟಿಯನ್ನು ಹಾಗೂ ಅವರ ಶೈಕ್ಷಣಿಕ ಅರ್ಹತೆ ಮೇರೆಗೆ ನಿಗದಿಪಡಿಸಿದ ವೇತನ ಸೇರಿ, ಸಭೆಯಲ್ಲಿ ಮಂಡಿಸಲಾಗಿ, ಆ ಕುರಿತು ಸುದೀರ್ಘ ಚರ್ಚೆಯ ನಂತರ ಸಿಂಡಿಕೇಟ್ ಸಭೆಯಲ್ಲಿ ಆಯ್ಕೆ ಮಾಡಿದ ಉಪನ್ಯಾಸಕರ ಪಟ್ಟಿಯನ್ನು ಅನುಮೋದಿಸಿತು.<br>ಮುಂದುವರೆದು, ಶೈಕ್ಷಣಿಕ ಅರ್ಹತೆ ಪ್ರಕಾರ ವೇತನವನ್ನು ನಿಗದಿಪಡಿಸುವ ಬಗ್ಗೆ ಹಣಕಾಸು ಸಮಿತಿಯಲ್ಲಿ ಚರ್ಚಿಸಿ, ಒಪ್ಪಿಗೆ ಪಡೆದಿರುವುದಾಗಿ ಕುಲಸಚಿವರು ಸಭೆಗೆ ತಿಳಿಸಿದರು. ಇದರ ಬಗ್ಗೆ ಚರ್ಚಿಸಿ ಸಿಂಡಿಕೇಟ್ ಸಭೆಯು ಅತಿಥಿ ಉಪನ್ಯಾಸಕರ ವೇತನವನ್ನು ಹಣಕಾಸು ಸಮಿತಿ ನಿರ್ಣಯದಂತೆ ನಿಗದಿ ಮಾಡಲು ಅನುಮೋದೊಸಿತು. |
| 08 | ರಾಯಚೂರು ವಿಶ್ವವಿದ್ಯಾಲಯ ಆವರಣದಲ್ಲಿ ಕಲ್ಯಾಣ ಕರ್ನಾಟಕ ಮಾನವ ಜಿನೋಮ್ ಅಧ್ಯಯನ ಸಂಸ್ಥೆ ಸ್ಥಾಪಿಸುವ ಕಾಮಗಾರಿಯ ಪಟ್ಟಿಗೆ ಸರ್ಕಾರದಿಂದ ಆಡಳಿತಾತ್ಮಕ ಅನುಮೋದನೆ ಪಡೆಯುವ ಕುರಿತು ಚರ್ಚೆ. | ರಾಯಚೂರು ವಿಶ್ವವಿದ್ಯಾಲಯದ ಆವರಣದಲ್ಲಿ ಕಲ್ಯಾಣ ಕರ್ನಾಟಕ ಮಾನವ ಜೀನೋಮಾ ಅಧ್ಯಯನ ಸಂಸ್ಥೆಯನ್ನು ಸ್ಥಾಪಿಸಲು ರಾಯಚೂರು ವಿಶ್ವವಿದ್ಯಾಲಯವು ಕಳೆದ 3 ವರ್ಷಗಳಿಂದ ಸತತ ಪ್ರಯತ್ನ ಮಾಡುತ್ತಲೇ ಬಂದಿದ್ದು, ಅಂದಿನ ಮುಖ್ಯಮಂತ್ರಿಗಳಾದ ಎಸ್.ಆರ್.ಬೊಮ್ಮಾಯಿ ಅವರು ತಾತ್ವಿಕವಾಗಿ ಒಪ್ಪಿಗೆ ನೀಡಿ ಕಲ್ಯಾಣ ಕರ್ನಾಟಕ ಅಭಿವೃದ್ಧಿ ನಿಗಮಕ್ಕೆ ಶೀಫಾರಸ್ಸು ಮಾಡಲಾಗಿತ್ತು. ಈ ನಡುವೆ ಈ ಯೋಜನೆ (ಪ್ರಾಜೆಕ್ಟ್)ಯನ್ನು ಅನುಷ್ಠಾನಗೊಳಿಸಲು ಗೌರವಾನ್ವಿತ ರಾಜ್ಯಪಾಲರ ಗಮನಕ್ಕೆ ತರಲಾಗಿತ್ತು. ಘನತೆವೆತ್ತ ರಾಜ್ಯಪಾಲರು ಈ ಮಾನವ ಜೀನೋಮಾ ಅಧ್ಯಯನ ಸಂಸ್ಥೆಯನ್ನು ರಾಯಚೂರು |

| | | |
|---|---|---|
| | | ವಿಶ್ವವಿದ್ಯಾಲಯದಲ್ಲಿ ಕಲ್ಯಾಣ ಕರ್ನಾಟಕ ಅಭಿವೃದ್ಧಿ ನಿಗಮದಿಂದ ಸ್ಥಾಪನೆಗೊಳ್ಳಬೇಕೆಂದು ಸರ್ಕಾರಕ್ಕೆ ಸೂಚನೆ ನೀಡಿದ್ದರು. ಈ ಸೂಚನೆ ಅನ್ವಯ ಕೆಕೆಆರ್‌ಡಿಬಿಯಿಂದ ವಿಶ್ವವಿದ್ಯಾಲಯಕ್ಕೆ ತಾತ್ವಿಕವಾಗಿ ಒಪ್ಪಿಗೆ ನೀಡಿ ಸರ್ಕಾರದ ಆಡಳಿತಾತ್ಮಕ ಅನುಮೋದನೆಗಾಗಿ ಕಳುಹಿಸಿಕೊಟ್ಟಿರುವ ಬಗ್ಗೆ ವಿಶ್ವವಿದ್ಯಾಲಯಕ್ಕೆ ಪತ್ರದ ಮುಖಾಂತರ ತಿಳಿಸಿರುತ್ತದೆ. ಸಿಂಡಿಕೇಟ್ ಸಭೆಯಲ್ಲಿ ಈ ವಿಚಾರದ ಬಗ್ಗೆ ಕುಲಂಕೂಷವಾಗಿ ಚರ್ಚಿಸಿ ಈ ಪ್ರಾಜೆಕ್ಟ್‌ನ್ನು ಅನುಷ್ಠಾನಗೊಳಿಸಲು ಮಾನ್ಯ ಕುಲಪತಿಗಳು ಸೂಕ್ತ ತಜ್ಞರ ಸಮಿತಿಯನ್ನು ರಚಿಸಿ, ಡಿಪಿಆರ್ ತಯಾರಿಸಿ ಸರ್ಕಾರಕ್ಕೆ ಸಲ್ಲಿಸಲು ಮಾನ್ಯ ಕುಲಪತಿಗಳಿಗೆ ಅಧಿಕಾರವನ್ನು ಸಭೆಯು ನೀಡಿ ಅನುಮೋದಿಸಿತು.<br>ಮುಂದುವರೆದು, ಈ ಯೋಜನೆ ಕಾರ್ಯರೂಪಕ್ಕೆ ತರಲು ಮಾನ್ಯ ಕುಲಪತಿಗಳಿಗೆ ಎಲ್ಲ ನಿರ್ಣಯಗಳನ್ನು ತೆಗೆದುಕೊಳ್ಳಲು ಸಭೆಯು ಒಪ್ಪಿಗೆ ನೀಡಿ, ಇದರ ಪ್ರಗತಿ ಬಗ್ಗೆ ಮುಂಬರುವ ಸಿಂಡಿಕೇಟ್ ಸಭೆಯಲ್ಲಿ ಮಂಡಿಸಲು ನಿರ್ಣಯಿಸಲಾಯಿತು. |
| 09 | ದಿನಾಂಕ ೧೮.೧೨.೨೦೨೩ ರಂದು ಜರುಗಿದ ಹಣಕಾಸು ಸಮಿತಿ ಸಭೆಯಲ್ಲಿ ಕೂಲಂಕುಶವಾಗಿ ಚರ್ಚಿಸಿ ಅನುಮೋದನೆಗೊಂಡ ಕರ್ನಾಟಕ ರಾಜ್ಯ ಕ್ರೀಕೆಟ್ ಸಂಘ (Karnataka State Cricket Association (KSCA)) ಹಾಗೂ ರಾಯಚೂರು ವಿಶ್ವವಿದ್ಯಾಲಯದ ನಡುವೆ ವಿಶ್ವವಿದ್ಯಾಲಯದ ಕ್ರೀಕೆಟ್ ಕ್ರೀಡಾಂಗಣವನ್ನು ನಿರ್ಮಾಣ ಮಾಡಲು ಭೂಮಿಯನ್ನು ನೀಡುವ ಕುರಿತು ಒಪ್ಪಂದ (MoU) ಮಾಡಿಕೊಳ್ಳಲು ಸಿಂಡಿಕೇಟ್ ಅನುಮೋದನೆ ನೀಡುವ ಕುರಿತು. | ರಾಯಚೂರು ವಿಶ್ವವಿದ್ಯಾಲಯವು ಕರ್ನಾಟಕ ರಾಜ್ಯ ಕ್ರೀಕೆಟ್ ಸಂಘ, KSCA (Karnataka State Cricket Association) ಯೊಂದಿಗೆ ಸುಮಾರು ಒಂದುವರೆ ವರ್ಷದಿಂದ ಚರ್ಚಿಸಿದಂತೆ ರಾಯಚೂರು ವಿಶ್ವವಿದ್ಯಾಲಯದ 250 ಎಕರೆ ಭೂಮಿಯಲ್ಲಿ ಸುಮಾರು 25 ಎಕರೆಯನ್ನು ಲೀಜ್ ಮುಖಾಂತರ KSCA ಸರ್ಕಾರದ ಅನುಮತಿಯೊಂದಿಗೆ ನೀಡಿ, ಸುಸಜ್ಜಿತವಾ ಕ್ರೀಕೆಟ್ ಕ್ರೀಡಾಂಗಣವನ್ನು ಹಾಗೂ ಫೇವಿಲಿಯನ್ ನಿರ್ಮಾಣ ಮಾಡಲು ಹಾಗೂ MOU ಮಾಡಬೇಕೆಂಬ ಆಸಕ್ತಿಯಿಂದ ಸರ್ಕಾರಕ್ಕೆ ಪತ್ರವನ್ನು ಸಲ್ಲಿಸಲಾಗಿದೆ. ಉನ್ನತ ಶಿಕ್ಷಣ ಇಲಾಖೆಯು ಈ ನಿಟ್ಟಿನಲ್ಲಿ ರಾಯಚೂರು ವಿಶ್ವವಿದ್ಯಾಲಯದ ವಿವಿಧ ಪ್ರಾಧಿಕಾರಗಳ ಒಪ್ಪಿಗೆಯನ್ನು ಪಡೆದು, ಸರ್ಕಾರಕ್ಕೆ KSCA ಯೊಂದಿಗೆ ಒಪ್ಪಂದ ಮಾಡಿಕೊಳ್ಳುವ ವಿಷಯವನ್ನು ಸಲ್ಲಿಸಲು ನಿರ್ದೇಶಿಸಿತು. ಈ ನಿರ್ದೇಶನದನ್ವಯ ಈಗಾಗಲೇ ವಿದ್ಯಾವಿಷಯಕ ಪರಿಷತ್ ಸಭೆಯಲ್ಲಿ ಹಾಗೂ ಹಣಕಾಸು ಸಮಿತಿಯಲ್ಲಿ ಮಂಡಿಸಿ ಒಪ್ಪಿಗೆ ನೀಡಲಾಗಿರುತ್ತದೆ. ಈ ವಿಷಯ ಕುರಿತು ಸುದೀರ್ಘ ಚರ್ಚೆಯ ನಂತರ ಸಿಂಡಿಕೇಟ್ ಸದಸ್ಯರುಗಳೆಲ್ಲರು ಸೇರಿದಂತೆ, ಬೆಂಗಳೂರಿನ KSCA ಗೆ ಭೇಟಿ ನೀಡಿ, ಅವರೊಂದಿಗೆ ನೇರವಾಗಿ MOU ವಿವಿಧ ವಿಷಯಗಳನ್ನು ಚರ್ಚಿಸುವುದರೊಂದಿಗೆ ಈ ಕ್ರೀಡಾಂಗಣ ಎಷ್ಟರ ಮಟ್ಟಿಗೆ ವಿಶ್ವವಿದ್ಯಾಲಯಕ್ಕೆ ಅನುಕೂಲವಾಗುತ್ತದೆ ಮತ್ತು KSCAಯ ಷರತ್ತುಗಳು ಈ ವಿಶ್ವವಿದ್ಯಾಲಯದ ಕ್ರೀಡಾ ಬೆಳವಣಿಗೆಗೆ ಎಷ್ಟರ ಮಟ್ಟಿಗೆ ಅನುಕೂಲವಾಗುತ್ತದೆ ಹಾಗೂ ಮತ್ತಿತರ ವಿಷಯಗಳನ್ನು ನೇರವಾಗಿ KSCA ಯೊಂದಿಗೆ ಚರ್ಚಿಸಿದ ನಂತರವೇ ಅನುಮೋದನೆ ನೀಡಲು ತೀರ್ಮಾನಿಸಲಾಯಿತು. |
| 10 | ರಾಯಚೂರು ವಿಶ್ವವಿದ್ಯಾಲಯ ಆವರಣದಲ್ಲಿ ಕಲ್ಯಾಣ ಕರ್ನಾಟಕ ಪ್ರದೇಶಾಭಿವೃದ್ಧಿ ಮಂಡಳಿಯಿಂದ ಕೃತಕ ಬುದ್ದಿವಂತಿಕೆ ಕೇಂದ್ರ (Centre for Artificial Intelligence) ವನ್ನು ಸ್ಥಾಪಿಸುವ ಕುರಿತು ಚರ್ಚೆ. | ಈಗಾಗಲೇ ಐಟಂ ನಂ. 8 ರಲ್ಲಿ ಚರ್ಚಿಸಿದಂತೆ ಕರ್ನಾಟಕ ಮಾನವ ಜೀನೋಮಾ ಸಂಸ್ಥೆ ಸ್ಥಾಪಿಸುವ ರೀತಿಯಲ್ಲಿ (Centre for Artificial Intelligence) ರಾಯಚೂರು ವಿಶ್ವವಿದ್ಯಾಲಯದಲ್ಲಿ ಸ್ಥಾಪಿಸುವ ಕ್ರೀಯಾ ಯೋಜನೆಯನ್ನು ಕಲ್ಯಾಣ ಕರ್ನಾಟಕ ಪ್ರದೇಶಾಭಿವೃದ್ಧಿ |

| | | |
|---|---|---|
| | | ಮಂಡಳಿಗೆ 2021-22 ಸಾಲಿನಲ್ಲಿ ನೀಡಲಾಗಿದ್ದು, ಅದಕ್ಕಾಗಿ ಸುಮಾರು 9.5 ಕೋಟಿರೂಗಳ ಅಂದಾಜು ಮೊತ್ತವನ್ನು ಬಿಡುಗಡೆ ಮಾಡುವುದಾಗಿ ಅನುಮೋದನೆ ನೀಡಿ ಆದೇಶಿಸಲಾಗಿತ್ತು. ಆದರೆ ಕೆಲವು ಅನಪೇಕ್ಷಿತ ಬೆಳವಣಿಗೆಗಳ ಹಿನ್ನಲೆಯಲ್ಲಿ ಕರ್ನಾಟಕ ಪ್ರದೇಶಾಭಿವೃದ್ಧಿ ಮಂಡಳಿಯು ಈ ಆದೇಶವನ್ನು ಬದಲಾವಣೆ ಮಾಡಿ ಈ ಹಣವನ್ನು ಸರ್ಕಾರದ ನಲಿ-ಕಲಿ ಕೇಂದ್ರಗಳಿಗೆ ಪುನರ್ ಹಂಚಿಕೆ ಮಾಡಿತ್ತು.<br>ಈ ನಿಟ್ಟಿನಲ್ಲಿ ರಾಯಚೂರು ವಿಶ್ವವಿದ್ಯಾಲಯವು ಸರ್ಕಾರಕ್ಕೆ ಬರೆದ ಪತ್ರದನ್ವಯ ಹಾಗೂ ಮಾನ್ಯ ಕುಲಪತಿಗಳು ಕೆಕೆಆರ್‌ಡಿಬಿ ಜೊತೆ ನಡೆಸಿದ ಸಭೆಯಲ್ಲಿ ರಾಯಚೂರು ವಿಶ್ವವಿದ್ಯಾಲಯಕ್ಕೆ ನೀಡಬೇಕು ಎಂದು ಮನವಿ ಮಾಡಿದ್ದು, ಈ ಮನವಿಗೆ ಕೆಕೆಆರ್‌ಡಿಬಿ ಸಕಾರಾತ್ಮವಾಗಿ ಸ್ಪಂದಿಸಿದ್ದು, Centre for Artificial Intelligence ಸ್ಥಾಪಿಸಲು ಮೊದಲ ಆದೇಶದಂತೆ ಒಪ್ಪಿಗೆ ನೀಡಿರುತ್ತದೆ.<br>ಈಗಾಗಲೇ ಆರ್ಟಿಫೀಸಿಯಲ್ ಇಂಟಲಿಜೆನ್ಸ್ ಕಾಮಗಾರಿಯ ಟೆಂಡರ್ ಕರೆಯಲಾಗಿದ್ದು, ಟೆಕ್ನಿಕಲ್ ಮತ್ತು ಫೈನಾನ್ಸಿಯಲ್ ಬಿಡ್ ತೆರೆಯಬೇಕಾಗಿದ್ದು, ಕೆಕೆಆರ್‌ಡಿಬಿ ಯಿಂದ ಹಣ ಬಿಡುಗಡೆಯಾದ ಬಳಿಕ ಅದನ್ನು ಮುಂದುವರೆಸಲು ಸಭೆಯಲ್ಲಿ ನಿರ್ಣಯಿಸಿ, ಅನುಮೋದಿಸಲಾಯಿತು. |
| 11 | ರಾಯಚೂರು ವಿಶ್ವವಿದ್ಯಾಲಯದಲ್ಲಿ ಸ್ನಾತಕ ಹಾಗೂ ಸ್ನಾತಕೋತ್ತರ ಪದವಿ ಪರೀಕ್ಷೆಗಳ ಉತ್ತರ ಪತ್ರಿಕೆಗಳನ್ನು ಡಿಜಿಟಲ್ ಮೌಲ್ಯಮಾಪನ ಮಾಡುವ ಕುರಿತು ಚರ್ಚೆ. | ರಾಯಚೂರು ವಿಶ್ವವಿದ್ಯಾಲಯದಲ್ಲಿ ಸ್ನಾತಕ ಮತ್ತು ಸ್ನಾತಕೋತ್ತರ ಪರೀಕ್ಷೆಗಳ ಉತ್ತರ ಪತ್ರಿಕೆಗಳ ಮೌಲ್ಯಮಾಪನ ಮಾಡಿಸಲು ಹೀಗಾಗಲೇ ತೀರ್ಮಾನಿಸಿ ಡಿಜಿಟಲ್ ಮೌಲ್ಯಮಾಪನ ಮಾಡಿಸಲಾಗಿದೆ. ಈ ಹಿನ್ನಲೆಯಲ್ಲಿ ಮುಂದಿನ ಒಂದು ವರ್ಷಕ್ಕೆ ಬರುವ ಸ್ನಾತಕ ಮತ್ತು ಸ್ನಾತಕೋತ್ತರ ಪರೀಕ್ಷೆಗಳ ಉತ್ತರ ಪತ್ರಿಕೆಗಳನ್ನು ಡಿಜಿಟಲ್ ಮೌಲ್ಯಮಾಪನ ಮಾಡಿಸಲು ಚರ್ಚಿಸಲಾಗಿ ಈ ಕುರಿತು ಒಂದು ವರ್ಷಕ್ಕೆ ಕುಲಸಚಿವರು (ಮೌಲ್ಯಮಾಪನ) ಟೆಂಡರ್ ದಾಖಲೆಗಳನ್ನು ತಯಾರಿಸಿ, 1 ವರ್ಷಕ್ಕೆ ಟೆಂಡರ್ ಕರೆಯಲು ಸಿಂಡಿಕೇಟ್ ಸಭೆ ಒಪ್ಪಿಗೆ ನೀಡಿ, ಅನುಮೋದಿಸಿತು. |
| 12 | ರಾಯಚೂರು ವಿಶ್ವವಿದ್ಯಾಲಯದ ಕ್ರೀಡಾ ಮತ್ತು ದೈಹಿಕ ಶಿಕ್ಷಣದ ಸಂಯೋಜಕರಾಗಿ ತಾತ್ಕಾಲಿಕವಾಗಿ ಕಾರ್ಯನಿರ್ವಹಿಸುತ್ತಿರುವ ಶ್ರೀ ಮಲ್ಲಿಕಾರ್ಜುನ.ಎನ್ ಇವರ ಕರ್ತವ್ಯದ ಅವಧಿ 30.11.2023 ರಂದು ಮುಗಿದಿರುವುದರಿಂದ ಸದರಿಯವರ ಸೇವೆಯನ್ನು ಮುಂದಿನ 11 ತಿಂಗಳವರೆಗೆ ಅಥವಾ ಮುಂದಿನ ಆದೇಶದವರೆಗೆ ವಿಸ್ತರಿಸುವ ಕುರಿತು. | ರಾಯಚೂರು ವಿಶ್ವವಿದ್ಯಾಲಯದ ಕ್ರೀಡಾ ಮತ್ತು ದೈಹಿಕ ಶಿಕ್ಷಣದ ಸಂಯೋಜಕರಾಗಿ ತಾತ್ಕಾಲಿಕವಾಗಿ ಕಾರ್ಯನಿರ್ವಹಿಸುತ್ತಿರುವ ಶ್ರೀ.ಮಲ್ಲಿಕಾರ್ಜುನ್ ಎನ್. ಇವರ ಕರ್ತವ್ಯದ ಅವಧಿ ದಿನಾಂಕ 30-11-2023 ರಂದು ಮುಗಿದಿರುವುದರಿಂದ ಸದರಿ ಅವರ ಸೇವೆಯನ್ನು 11 ತಿಂಗಳವರೆಗೆ ಅಥವಾ ಮುಂದಿನ ಆದೇಶದವರೆಗೆ ಮುಂದುವರೆಸಲು ಸಭೆಯು ನಿರ್ಣಯಿಸಿ, ಅನುಮೋದಿಸಿತು.<br>ಮುಂದುವರೆದು, ಶ್ರೀ.ಮಲ್ಲಿಕಾರ್ಜುನ್ ಎನ್. ಅವರು ವಿಶ್ವವಿದ್ಯಾಲಯದ ಕ್ರೀಡಾ ಚಟುವಟಿಕೆ ಹಾಗೂ ವಿದ್ಯಾರ್ಥಿ ಕಲ್ಯಾಣ ವಿಭಾಗದಲ್ಲೂ ಸಹ ಕಾರ್ಯನಿರ್ವಹಿಸುತ್ತಿದ್ದು, ಇವರನ್ನು ಪೂರ್ಣಕಾಲಿಕ ಅತಿಥಿ ಉಪನ್ಯಾಸಕರ ಸಮ ಎಂದು ಪರಿಗಣಿಸಿ ಶ್ರೀ.ಮಲ್ಲಿಕಾರ್ಜುನ್ ಎನ್. ಅವರ ಶೈಕ್ಷಣಿಕ ಅರ್ಹತೆ ಪ್ರಕಾರ ಅತಿಥಿ ಉಪನ್ಯಾಸಕರಿಗೆ ನೀಡುತ್ತಿರುವ ಮಾಸಿಕ 28 ಸಾವಿರ ವೇತನ ನೀಡಲು ತೀರ್ಮಾನಿಸಲಾಯಿತು.<br>ಮುಂದುವರೆದು, ರಾಯಚೂರು |

| | | |
|---|---|---|
| | | ವಿಶ್ವವಿದ್ಯಾಲಯದ ಮಹಿಳಾ ವಿದ್ಯಾರ್ಥಿ ಹಾಗೂ ಮಹಿಳಾ ಕ್ರೀಡಾಪಟುಗಳನ್ನು ಗಮನದಲ್ಲಿಟ್ಟುಕೊಂಡು ಮಹಿಳಾ ಕ್ರೀಡಾ ಸಂಯೋಜಕಿಯನ್ನು ನೇಮಿಸಿಕೊಳ್ಳಬೇಕೆಂದು ತೀರ್ಮಾನಿಸಿ, ಮಾನ್ಯ ಕುಲಪತಿಗಳು ತಮ್ಮ ಅಧಿಕಾರದಡಿಯಲ್ಲಿ ಕ್ರೀಡಾ ಮತ್ತು ದೈಹಿಕ ಶಿಕ್ಷಣದ ಮಹಿಳಾ ಸಂಯೋಜಕಿಯನ್ನು ನೇಮಿಸಿಕೊಳ್ಳಲು ಸಭೆಯು ಅನುಮತಿ ನೀಡಿತು. |
| 13 | ರಾಯಚೂರು ವಿಶ್ವವಿದ್ಯಾಲಯದ ಕಾಲೇಜು ಅಭಿವೃದ್ಧಿ ಮಂಡಳಿ ನಿರ್ದೇಶಕರಾದ ಡಾ. ರಾಘವೇಂದ್ರ ಪತೇಘೂರ ಇವರ ಗುತ್ತಿಗೆ ಆಧಾರದ ಮೇಲೆ ಕಾರ್ಯ ನಿರ್ವಹಿಸುವ ಸೇವಾ ಅವಧಿಯು ನವೆಂಬರ್–2023 ರಂದು ಮುಗಿದಿರುವುದರಿಂದ ಸದರಿಯವರ ಸೇವೆಯನ್ನು ಮುಂದಿನ 11 ತಿಂಗಳವರೆಗೆ ಅಥವಾ ಮುಂದಿನ ಆದೇಶದವರೆಗೆ ವಿಸ್ತರಿಸುವ ಕುರಿತು. | ರಾಯಚೂರು ವಿಶ್ವವಿದ್ಯಾಲಯದ ಕಾಲೇಜು ಅಭಿವೃದ್ಧಿ ಮಂಡಳಿ ನಿರ್ದೇಶಕರಾದ ಡಾ. ರಾಘವೇಂದ್ರ ಪತೇಘೂರ ಇವರ ಕರ್ತವ್ಯದ ಅವಧಿ ದಿನಾಂಕ 04-12-2023ರಂದು ಮುಗಿದಿರುವುದರಿಂದ ಸದರಿ ಅವರ ಸೇವೆಯನ್ನು 11 ತಿಂಗಳವರೆಗೆ ಅಥವಾ ಮುಂದಿನ ಆದೇಶದವರೆಗೆ ಮುಂದುವರೆಸಿ, ಸದರಿಯವರಿಗೆ ಪ್ರತಿ ತಿಂಗಳಿಗೆ 50 ಸಾವಿರ ರೂಗಳ ಸಂಚಿತ ವೇತನ ನೀಡಿ, ಅವರನ್ನು ಮುಂದುವರೆಸಲು ಸಭೆಯು ಒಪ್ಪಿಗೆ ಸೂಚಿಸಿ, ಅನುಮೋದಿಸಲಾಯಿತು. |
| 14 | 2022-23 ನೇ ಸಾಲಿನಲ್ಲಿ ವಾಣಿಜ್ಯ ಅಧ್ಯಯನ ವಿಭಾಗದಲ್ಲಿ ಅರೇಕಾಲಿಕ ಅತಿಥಿ ಉಪನ್ಯಾಸಕಿಯಾಗಿ ಕಾರ್ಯ ನಿರ್ವಹಿಸಿದ ಶ್ರೀಮತಿ ವಿಜಯಲಕ್ಷ್ಮಿ ಇವರನ್ನು ವಿಶ್ವವಿದ್ಯಾಲಯದ ಹಣಕಾಸು ಕಚೇರಿಯಲ್ಲಿ ತಾತ್ಕಾಲಿಕವಾಗಿ ಕಾರ್ಯನಿರ್ವಹಿಸಲು ತೆಗೆದುಕೊಳ್ಳುವ ಕುರಿತು. | ರಾಯಚೂರು ಪಿ.ಜಿ.ಸೆಂಟರ್ (ಗುಲ್ಬರ್ಗಾ ವಿಶ್ವವಿದ್ಯಾಲಯ) ನ ವಾಣಿಜ್ಯ ಅಧ್ಯಯನ ವಿಭಾಗದಲ್ಲಿ ಸುಮಾರು 14 ವರ್ಷಗಳಿಂದ ಶ್ರೀಮತಿ.ವಿಜಯಲಕ್ಷ್ಮೀ ಅವರು ಅತಿಥಿ ಉಪನ್ಯಾಸಕರಾಗಿ ಕಾರ್ಯನಿರ್ವಹಿಸುತ್ತಿದ್ದು, ರಾಯಚೂರು ವಿಶ್ವವಿದ್ಯಾಲಯ ಸ್ಥಾಪನೆಗೊಂಡ ನಂತರ 2021-22, 2022-23 ನೇ ಸಾಲಿನಿಂದ ಅತಿಥಿ ಉಪನ್ಯಾಸಕರಾಗಿ ತಮ್ಮ ತರಗತಿಗಳು ಮುಗಿದ ನಂತರ ಅವರು ಹಣಕಾಸು ವಿಭಾಗದಲ್ಲಿ ಟ್ಯಾಲಿ ಹಾಗೂ ಅಕೌಂಟ್ಸ್ ವಿಭಾಗದಲ್ಲಿ ಕಾರ್ಯನಿರ್ವಹಿಸಿಕೊಂಡು ಬಂದಿರುತ್ತಾರೆ. ಈ ಕಾರ್ಯಕ್ಕೆ ಅವರಿಗೆ ಯಾವುದೇ ಭತ್ಯೆ/ವೇತನವನ್ನು ನೀಡಿರುವುದಿಲ್ಲ. 2023-24ನೇ ಶೈಕ್ಷಣಿಕ ಸಾಲಿನಿಂದ ಅವರು ಅತಿಥಿ ಉಪನ್ಯಾಸಕ ವೃತ್ತಿ ಬಿಟ್ಟು ಪೂರ್ಣಪ್ರಮಾಣದಲ್ಲಿ ಹಣಕಾಸು ವಿಭಾಗದಲ್ಲಿ ಟ್ಯಾಲಿ ಹಾಗೂ ಅಕೌಂಟ್ಸ್ ಕೆಲಸವನ್ನು ನಿರ್ವಹಿಸುತ್ತಿದ್ದು, ಇವರ ಈ ಕಾರ್ಯಾಧ್ಯಕ್ಷತೆ ಹಾಗೂ ಭದ್ರತೆಯನ್ನು ಗಮನಿಸಿ, ಹಣಕಾಸು ಅಧಿಕಾರಿಗಳು ಇವರ ಸೇವೆಯನ್ನು ಹಣಕಾಸು ವಿಭಾಗಕ್ಕೆ ಅವಶ್ಯಕತೆ ಇದೆ ಎಂದು ಮಾನ್ಯ ಕುಲಪತಿಗಳಿಗೆ ಪತ್ರದ ಮುಖಾಂತರ ತಿಳಿಸಿರುತ್ತಾರೆ. ಈ ಬಗ್ಗೆ ಸಭೆಯಲ್ಲಿ ಕುಲಂಕೂಷವಾಗಿ ಚರ್ಚಿಸಿ ಶ್ರೀಮತಿ.ವಿಜಯಲಕ್ಷ್ಮೀ ಅವರು ಎ.ಕಾಂ ಪದವೀಧರರಾಗಿದ್ದು, ಟ್ಯಾಲಿ ಹಾಗೂ ಅಕೌಂಟ್ಸ್ ಬಗ್ಗೆ ಪೂರ್ಣಪ್ರಮಾಣದಲ್ಲಿ ತಿಳಿದುಕೊಂಡಿದ್ದು, ಹಾಗೂ ಹಣಕಾಸು ಅಧಿಕಾರಿಗಳ ಪತ್ರವನ್ನು ಪರಿಗಣಿಸಿ, ಹಣಕಾಸು ವಿಭಾಗದಲ್ಲಿ ಅವಶ್ಯಕತೆವಿರುವ Assistant Accountant ಎಂಬ ಪದನಾಮದೊಂದಿಗೆ ಶ್ರೀಮತಿ.ವಿಜಯಲಕ್ಷ್ಮೀ ಅವರನ್ನು ಕುಲಪತಿಗಳ ಅಧಿಕಾರದಡಿಯಲ್ಲಿ ತಾತ್ಕಾಲಿಕವಾಗಿ 11 ತಿಂಗಳವರೆಗೆ ಅಥವಾ ಮುಂದಿನ ಆದೇಶದವರೆಗೆ ನೇಮಿಸಿಕೊಂಡು ಅವರಿಗೆ ಸಂಚಿತ ವೇತನದ ಆಧಾರದ ಮೇಲೆ ಮಾಸಿಕ 28 ಸಾವಿರ ರೂಗಳನ್ನು (**ಅತಿಥಿ ಉಪನ್ಯಾಸಕರ ವೇತನ ಸಮನಾಗಿ**) ನೀಡಲು ಸಭೆಯಲ್ಲಿ ತೀರ್ಮಾನಿಸಿ, ಅನುಮೋದಿಸಲಾಯಿತು. |
| 15 | **ಅಧ್ಯಕ್ಷರ ಅನುಮತಿಯ ಮೇರೆಗೆ ಇತರ ವಿಷಯಗಳ ಚರ್ಚೆ.** | |
| 01 | ಬಿ.ಎಡ್ ಸ್ನಾತಕ ಪದವಿಯ ಆಂತರಿಕ ಅಂಕಗಳ | ರಾಯಚೂರು ವಿಶ್ವವಿದ್ಯಾಲಯದ ಬಿ.ಎಡ್ ಸ್ನಾತಕ |

| | | |
|---|---|---|
| | ಮೌಲ್ಯಮಾಪನ ಸಮನ್ವಯ ಸಮಿತಿ ಬಗ್ಗೆ ಚರ್ಚೆ. | ಪದವಿಯ ಶೈಕ್ಷಣಿಕ ಗುಣಮಟ್ಟವನ್ನು ಉನ್ನತೀಕರಿಸುವ ಹಿನ್ನಲೆಯಲ್ಲಿ ರಾಯಚೂರು ವಿಶ್ವವಿದ್ಯಾಲಯವು ಆಂತರಿಕ ಅಂಕಗಳ ಮೌಲ್ಯಮಾಪನ ಸಮನ್ವಯ ಸಮಿತಿಯನ್ನು ರಚಿಸಿ, ಈ ಒಂದು ಆಂತರಿಕ ಅಂಕಗಳ ಮೌಲ್ಯಮಾಪನ ಸಮನ್ವಯ ಸಮಿತಿಗೆ ಬೇರೆ ವಿಶ್ವವಿದ್ಯಾಲಯದ ಎಂ.ಎಡ್ ವಿಷಯ ತಜ್ಞರನ್ನು ಪ್ರೊಫೇಸರ್ ಪ್ರಾಧ್ಯಾಪಕ ಶ್ರೇಣಿಯ ಅಧ್ಯಾಪಕರನ್ನು ಅಧ್ಯಕ್ಷರನ್ನಾಗಿ, ಬಿ.ಎಡ್ ಕಾಲೇಜಿನ ಸೇವಾ ಜೇಷ್ಠತೆಯ ಹಿರಿತನವನ್ನು ಹೊಂದಿದ ಪ್ರಾಂಶುಪಾಲರನ್ನು ಸಂಯೋಜಕರನ್ನಾಗಿ ಹಾಗೂ ಇನ್ನೊಬ್ಬರನ್ನು ಸದಸ್ಯರನ್ನಾಗಿ ನೇಮಿಸಲು ಮತ್ತು ಆಂತರಿಕ ಅಂಕಗಳ ಮೌಲ್ಯಮಾಪನ ಸಮನ್ವಯ ಸಮಿತಿಯನ್ನು ರಚಿಸಿ, ಕುಲಸಚಿವರು (ಮೌಲ್ಯಮಾಪನ) ಇವರು ನಿಯಮಾವಳಿ ಕುರಿತು ಮಾನ್ಯ ಕುಲಪತಿಗಳಿಗೆ ವರದಿ ನೀಡಲು ಸಭೆಯಲ್ಲಿ ತೀರ್ಮಾನಿಸಿ, ಅನುಮೋದಿಸಲಾಯಿತು. |
| 02 | ಕರ್ನಾಟಕ-ವೇಲ್ಸ್ ವಿಶ್ವವಿದ್ಯಾಲಯಗಳ ಒಡಂಬಡಿಕೆ ಯೋಜನೆಗಳ ಅಡಿಯಲ್ಲಿ ಕಾರ್ಡಿಫ್ ಮೇಟ್ರೋ ಪಾಲಿಟನ್ ವಿಶ್ವವಿದ್ಯಾಲಯ ಜೊತೆಗೆ ರಾಯಚೂರು ವಿಶ್ವವಿದ್ಯಾಲಯ ಸಹಯೋಗ ಹೊಂದುವ ಕುರಿತು ಚರ್ಚೆ. | ಕರ್ನಾಟಕ ರಾಜ್ಯ ಹಾಗೂ ಉನ್ನತ ಶಿಕ್ಷಣ ಪರಿಷತ್ ಮತ್ತು ಬ್ರಿಟಿಷ್ ಕೌನ್ಸಿಲ್ ಸೇರಿದಂತೆ ಮಾಡಿಕೊಂಡ ಒಡಂಬಡಿಕೆಯ ಪ್ರಕಾರ ಸಾರ್ವಜನಿಕ ವಲಯಗಳ ನಾಯಕತ್ವ ಕಾರ್ಯಕ್ರಮದಡಿ ರಾಯಚೂರು ವಿಶ್ವವಿದ್ಯಾಲಯದ ಮಾನ್ಯ ಕುಲಪತಿಗಳು ಬ್ರಿಟನ್ ಮತ್ತು ಯುಕೆಗೆ ಕರ್ನಾಟಕ ಸಾರ್ವಜನಿಕ ವಿಶ್ವವಿದ್ಯಾಲಯಗಳ ಕುಲಪತಿಗಳ ಡೆಲಿಗೇಷನ್‌ಲ್ಲಿ ಹೋಗಿ ಬಂದ ನಂತರ ಅಲ್ಲಿನ ವಿಶ್ವವಿದ್ಯಾಲಯಗಳಲ್ಲಿರುವ ಶೈಕ್ಷಣಿಕ ಸೌಕರ್ಯಗಳ ಕುರಿತು ರಾಯಚೂರು ವಿಶ್ವವಿದ್ಯಾಲಯದ ಆಸಕ್ತಿಗಳನ್ನು ಕುರಿತು ಪ್ರಸ್ತುತಪಡಿಸಿದ್ದರು. ಈ ಹಿನ್ನಲೆಯಲ್ಲಿ ಕರ್ನಾಟಕ-ವೇಲ್ಸ್ ವಿಶ್ವವಿದ್ಯಾಲಯಗಳ ಒಡಂಬಡಿಕೆ ಯೋಜನೆಗಳ ಅಡಿಯಲ್ಲಿ ಕಾರ್ಡಿಫ್ ಮೇಟ್ರೋ ಪಾಲಿಟನ್ ವಿಶ್ವವಿದ್ಯಾಲಯ ಜೊತೆಗೆ ನಮ್ಮ ವಿಶ್ವವಿದ್ಯಾಲಯ ಸಹಯೋಗ ಹೊಂದಿದೆ. ಅದರೊಂದಿಗೆ ಕೆಪ್ಯಾಸಿಟಿ ಬಿಲ್ಡಿಂಗ್ ಸಲುವಾಗಿ ಕಂಪ್ಯೂಟರ್ ಸೈನ್ಸ್ ವಿಭಾಗದ ಆರ್ಟಿಫಿಷಿಯಲ್ ಇಂಟಲಿಜೆನ್ಸ್, ಸೈಬರ್ ಸೆಕ್ಯೂರುಟಿ ವಿಷಯದಲ್ಲಿ ವಿಶೇಷ ಉಪನ್ಯಾಸ ನೀಡಲು ಒಡಂಬಡಿಕೆಯಾಗಿದೆ.<br>ಈಗಾಗಲೇ ಕಾರ್ಡಿಫ್ ಮೇಟ್ರೋ ಪಾಲಿಟನ್ ವಿಶ್ವವಿದ್ಯಾಲಯವು 5000 ಪೌಂಡ್‌ಗಳ ಗ್ರಾಂಟ್‌ನ್ನು ಕಾಯ್ದಿರಿಸಿದೆ.<br>ಮುಂದುವರೆದು, ಒಡಂಬಡಿಕೆ ಪ್ರಕಾರ ಕೆಪ್ಯಾಸಿಟಿ ಬಿಲ್ಡಿಂಗ್ ಕಾರ್ಯಕ್ರಮ/ಕಾರ್ಯಗಾರ ಮಾರ್ಚ್ ತಿಂಗಳ ದಿನಾಂಕ 25 ರಿಂದ ನಡೆಸಲು ಉದ್ದೇಶ ಹೊಂದಿರುತ್ತದೆ. ಕರ್ನಾಟಕ ವೇಲ್ಸ್ ಒಡಂಬಡಿಕೆಯ ಪ್ರಕಾರ 5000 ಪೌಂಡ್‌ಗಳ ಮ್ಯಾಚಿಂಗ್ ಗ್ರಾಂಟ್‌ನ್ನು ಮೀಸಲಿಡಬೇಕಾಗುತ್ತದೆ. ಈ ವಿಚಾರದ ಸಾಧಕ/ಬಾಧಕಗಳ ಬಗ್ಗೆ ಚರ್ಚಿಸಿ ಈ ಒಡಂಬಡಿಕೆಯಿಂದ ರಾಯಚೂರು ವಿಶ್ವವಿದ್ಯಾಲಯಕ್ಕಾಗುವ ಪ್ರಯೋಜನೆಗಳನ್ನು ಗಮನದಲ್ಲಿಟ್ಟುಕೊಂಡು ವಿಶ್ವವಿದ್ಯಾಲಯದ ಆಂತರಿಕ ಸಂಪನ್ಮೂಲಗಳಿಂದ 5000 ಪೌಂಡ್‌ಗಳ ಮ್ಯಾಚಿಂಗ್ ಗ್ರಾಂಟ್ಸ್ ನೀಡಬಹುದಾಗಿ ನಿರ್ಧರಿಸಿ |

| | | |
|---|---|---|
| | | ಅನುಮೋದಿಸಲಾಯಿತು. ಮುಂದುವರೆದು ಕಾರ್ಡಿಫ್ ಮೇಟ್ರೋ ಪಾಲಿಟನ್ ವಿಶ್ವವಿದ್ಯಾಲಯದಿಂದ ರಾಯಚೂರು ವಿಶ್ವವಿದ್ಯಾಲಯಕ್ಕೆ ಕಾರ್ಯಗಾರಕ್ಕಾಗಿ ಆಗಮಿಸುತ್ತಿರುವ ತಜ್ಞರನ್ನು ವಿಶ್ವವಿದ್ಯಾಲಯದ ಅತಿಥಿಗಳೆಂದು ಪರಿಗಣಿಸಿ ಅಗತ್ಯ ಸೌಲಭ್ಯಗಳನ್ನು ಕಲ್ಪಿಸಿಕೊಡಬೇಕೆಂದು ನಿರ್ಣಯಿಸಿ, ಅನುಮೋದಿಸಲಾಯಿತು. |
| 03 | ಶ್ರೀ.ಮಾಲಿಪಾಟೀಲ್, ಸಿಂಡಿಕೇಟ್ ಸದಸ್ಯರು, ರಾಯಚೂರು ವಿಶ್ವವಿದ್ಯಾಲಯದಲ್ಲಿ ಆಚರಿಸುವ ವಿವಿಧ ಜಯಂತಿಗಳ ಬಗ್ಗೆ ಚರ್ಚೆ. | ಶ್ರೀ. ಮಾಲಿಪಾಟೀಲ್ ಅವರು ರಾಯಚೂರು ವಿಶ್ವವಿದ್ಯಾಲಯದ ಕಾರ್ಯ ಪ್ರವೃತ್ತಿಯನ್ನು ಶ್ಲಾಘಿಸುತ್ತ, ವಿಶ್ವವಿದ್ಯಾಲಯದಲ್ಲಿ ಜರಗುವ ವಿವಿಧ ಜಯಂತಿ ಕಾರ್ಯಕ್ರಮಗಳಲ್ಲಿ ಮೆರವಣಿಗೆ ಮಾಡುವುದನ್ನು ನಿಲ್ಲಿಸಿ, ವಿಶ್ವವಿದ್ಯಾಲಯ ರೂಪಿಸಿರುವ ಜಯಂತಿ ದಿನದ ಶೈಕ್ಷಣಿಕ ಕಾರ್ಯಕ್ರಮಗಳನ್ನು ಸಮಯಕ್ಕೆ ಸರಿಯಾಗಿ ಆಯೋಜಿಸಿ, ವಿದ್ಯಾರ್ಥಿಗಳಿಗೆ ಹಾಗೂ ಶಿಕ್ಷಕರಿಗೆ ಈ ಜಯಂತಿಯ ಮಹತ್ವವನ್ನು ಅರಿಯಲು ಅನುಕೂಲ ಮಾಡಿಕೊಟ್ಟಂತಾಗುತ್ತದೆ ಎಂದು ತಿಳಿಸಿದರು. ಇದಕ್ಕೆ ಸಭೆಯು ಸರ್ವಾನುಮತದಿಂದ ಒಪ್ಪಿಗೆ ಸೂಚಿಸಿ, ಬದಲಾವಣೆಯನ್ನು ತರಲು ಸಹಮತ ನೀಡಿತು. |
| 04 | ಯೋಗ, ಸಂಗೀತ ಸರ್ಟಿಫಿಕೇಟ್/ಡಿಪ್ಲೋಮಾ ಕೋರ್ಸ್‌ಗಳನ್ನು ನಡೆಸುವ ಬಗ್ಗೆ ಚರ್ಚೆ. | ಮಾನ್ಯ ಕುಲಪತಿಗಳು ಸಭೆಗೆ, ಯೋಗ, ಸಂಗೀತಾ ಸರ್ಟಿಫಿಕೇಟ್/ಡಿಪ್ಲೋಮಾ ಕೋರ್ಸ್‌ಗಳನ್ನು ಪ್ರಾರಂಭಿಸಲು ತೀರ್ಮಾನಿಸಲಾಗಿದ್ದು, ಈ ಕೋರ್ಸ್‌ಗಳನ್ನು ಪ್ರಾರಂಭಿಸಲು ವಿದ್ಯಾವಿಷಯಕ ಪರಿಷತ್ ಸಭೆಯಲ್ಲಿ ಅನುಮೋದನೆ ಪಡೆಯಲಾಗಿರುತ್ತದೆ ಎಂದು ಸಭೆಗೆ ತಿಳಿಸಿದರು. ಮುಂದುವರೆದು, ವಿಶ್ವವಿದ್ಯಾಲಯಕ್ಕೆ ಯೋಗ ಮತ್ತು ಸಂಗೀತ ವಿಭಾಗಗಳನ್ನು ಪ್ರಾರಂಭಿಸಲು ಮನವಿಗಳು ಸ್ವೀಕೃತವಾಗಿರುತ್ತವೆ. ಈ ವಿಷಯದ ಬಗ್ಗೆ ಕುಲಂಕೂಷವಾಗಿ ಸಭೆಯಲ್ಲಿ ಚರ್ಚಿಸಿ, ಈ ಎರಡು ವಿಭಾಗಗಳನ್ನು ಆರಂಭಿಸಲು, ಸರ್ಕಾರ ಹಾಗೂ ಹಣಕಾಸು ಇಲಾಖೆಯ ಅನುಮತಿ ಅವಶ್ಯಕತೆ ಇರುವುದರಿಂದ ಸರ್ಟಿಫಿಕೇಟ್ ಕೋರ್ಸ್ ನಡೆಸಬಹುದಾಗಿ, ತೀರ್ಮಾನಿಸಲಾಯಿತು.<br>ಮುಂದುವರೆದು, ಈ ಸರ್ಟಿಫಿಕೇಟ್ ಕೋರ್ಸ್‌ಗಳನ್ನು ನಡೆಸಲು ಯೋಗ ಮತ್ತು ಸಂಗೀತ ಸಂಯೋಜನಾಧಿಕಾರಿಗಳನ್ನು ಮಾನ್ಯ ಕುಲಪತಿಗಳು ತಮ್ಮ ಅಧಿಕಾರದಡಿಯಲ್ಲಿ 11 ತಿಂಗಳ ಕಾಲ ಅಥವಾ ಮುಂದಿನ ಆದೇಶದವರೆಗೆ, ತಾತ್ಕಾಲಿಕವಾಗಿ ನೇಮಿಸಿಕೊಂಡು ಅವರಿಗೆ ಸಂಚಿತ ವೇತನದ ಆಧಾರದ ಮೇಲೆ ಮಾಸಿಕ 18 ಸಾವಿರ ರೂಗಳನ್ನು (ಅರೆಕಾಲಿಕ ಅತಿಥಿ ಉಪನ್ಯಾಸಕರ ವೇತನ ಸಮನಾಗಿ) ನೀಡಲು ಸಭೆಯಲ್ಲಿ ತೀರ್ಮಾನಿಸಿ, ಅನುಮೋದಿಸಲಾಯಿತು. |

28/7/23

(ಪ್ರೊ.ವಿಶ್ವನಾಥ ಎಂ.)
ಕುಲಸಚಿವರು ಹಾಗೂ ಸದಸ್ಯ ಕಾರ್ಯದರ್ಶಿಗಳು
ರಾಯಚೂರು ವಿಶ್ವವಿದ್ಯಾಲಯ, ರಾಯಚೂರು.

(ಪ್ರೊ.ಹರೀಶ್ ರಾಮಸ್ವಾಮಿ)
ಕುಲಪತಿಗಳು ಹಾಗೂ ಅಧ್ಯಕ್ಷರು
ರಾಯಚೂರು ವಿಶ್ವವಿದ್ಯಾಲಯ, ರಾಯಚೂರು.

# TABLE-ANNEXURE-I

**<u>Professor</u> Posts** Sanctioned to Raichur University – **02 (Two)**
As per the Govt. orders the Professor Posts have been rostered as below.

| Sl. No. | Name of the Department/Subject | No. of Posts Sanctioned | Total Posts and Roster Point for 371(J) | Total Posts and Roster Point for Non-371(J) (Single post to be treated as GM) |
|---|---|---|---|---|
| | Economics, Commerce | 02 | 01-GM (Open) | 01-GM (Open) |
| | **Total** | **02** | **01-GM (Open)** | **01-GM (Open)** |

**<u>Associate Professor</u> Posts** Sanctioned to Raichur University– **05 (Five)**

As per the Govt. orders the Associate Professor Posts have been rostered as below:

| Sl. No. | Name of the Department/Subject | No. of Posts Sanctioned | Total Posts and Roster Point for 371(J) | Total Posts and Roster Point for Non-371(J) (Single post to be treated as GM) |
|---|---|---|---|---|
| 1 | English,<br>Political Science,<br>Chemistry,<br>Zoology,<br>Microbiology | **05** | 01-SC (Open)<br>01-GM (Open)<br>01-ST (Open)<br>01-GM (Women) | 01-GM (Open) |
| | **Total** | **05** | **04** | **01** |

**<u>Assistant Professor</u> Posts** Sanctioned to Raichur University– **24 (Twenty Four)** arranged in Alphabetical Order.
As per the Govt. orders the Assistant Professor Posts should be RosteredDepartment/Subject wise. Hence the University has rostered the positions as under.

| Sl. No. | Name of the Department/Subject | No. of Posts Sanctioned | Total Posts and Roster Point for 371(J) (Single post to be treated as GM) | Total Posts and Roster Point for Non-371(J) (Single post to be treated as GM) |
|---|---|---|---|---|
| 11 | Botany | **01** | 00 | 01-GM (Open) |
| 2 | Chemistry | **02** | 01-SC (Open)<br>01-GM (Open) | -- |
| 3 | Commerce | **01** | 00 | 01-GM (Open) |
| 4 | Computer Science | **01** | 00 | 01-GM (Open) |

| | | | | |
|---|---|---|---|---|
| 5 | Economics | **02** | 01-SC (Open)<br>01-GM (Open) | - |
| 6 | English | **02** | 01-SC (Open)<br>01-GM (Open) | - |
| 7 | History and Archaeology | **02** | 01-SC (Open)<br>01-GM (Open) | - |
| 8 | Journalism and Mass Communication | **01** | 00 | 01-GM (Open) |
| 9 | Mathematics | **02** | 01-SC (Open)<br>01-GM (Open) | - |
| 10 | Microbiology | **01** | 00 | 01-GM (Open) |
| 11 | Physics | **02** | 01-SC (Open)<br>01-GM (Open) | - |
| 12 | Political Science | **02** | 01-SC (Open)<br>01-GM (Open) | - |
| 13 | Social Work | **02** | 01-SC (Open)<br>01-GM (Open) | - |
| 14 | Sociology | **02** | 01-SC (Open)<br>01-GM (Open) | - |
| 15 | Zoology | **01** | 00 | 01-GM (Open) |
| | **Total** | **24** | **18** | **06** |